ಆದೇಶವನ್ನು ಕೊಟ್ಟಿದ್ದೇವೆ. ಆ ಆದೇಶದ ಪ್ರಕಾರ estimation ಬಂದಿದ್ದು ಎಂ.ಡಿಯವರ ಹತ್ತಿರ ಇದೆ. ನಾನು ಈಗಾಗಲೇ ಉತ್ತರ ಕೊಟ್ಟಂತೆ ಈ session ಆದ ತಕ್ಷಣ, ಮಾನ್ಯ ಮುಖ್ಯಮಂತ್ರಿಯವರಿಗೆ ನಿಗಮದ ಮಂಡಳಿಯ ಸಭೆ ಕರೆಯಬೇಕೆಂದು ಹೇಳಿದ್ದೇನೆ. ಇನ್ನು 15 ದಿವಸದೊಳಗೆ ಸಭೆಯಲ್ಲಿ ಅನುಮೋದನೆ ಮಾಡಿ, ಒಟ್ಟಾರೆ, ಈ ತಿಂಗಳ ಕೊನೆಯೊಳಗೆ ಅದಕ್ಕೆ ಟೆಂಡರ್ ಪ್ರಕ್ರಿಯೆಯನ್ನು ನಾವು ಪ್ರಾರಂಭ ಮಾಡುತ್ತೇವೆ.

ಅಧ್ಯಕ್ಷರು: ಮಾನ್ಯ ಹೆಚ್.ಡಿ.ರೇವಣ್ಣನವರ ಪರವಾಗಿ ಮಾನ್ಯ ವೆಂಕಟರಾವ್ ನಾಡಗೌಡರು ಪ್ರಶ್ನೆ ಕೇಳುವುದು.

ಜವಳಿ ಉದ್ಯಮದ ಪುನ:ಶ್ಚೇತನ

37 (95)

ಶ್ರೀ ರೇವಣ್ಣ ಹೆಚ್.ಡಿ (ಹೊಳೇನರಸೀಪುರ).

ಅ) ರಾಜ್ಯದಲ್ಲಿ ಜವಳಿ ಉದ್ಯಮವು ಅಳಿವಿನ ಅಂಚಿಗೆ ತಲುಪುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದಲ್ಲಿ ಜವಳಿ ಉದ್ಯಮದ ಪುನಶ್ಚೇತನ ಹಾಗೂ ಉತ್ತೇಜನಕ್ಕಾಗಿ ಸರ್ಕಾರವು ಕೈಗೊಂಡಿರುವ ಕ್ರಮಗಳಾವುವು?

ಆ) ಕಳೆದ ಮೂರು ವರ್ಷಗಳಲ್ಲಿ ಜವಳಿ ಉದ್ಯಮದ ಪುನಶ್ಚೇತನಕ್ಕಾಗಿ ಸರ್ಕಾರವು ಮೀಸಲಿಟ್ಟ ಹಾಗೂ ಖರ್ಚು ಮಾಡಿದ ಹಣವೆಷ್ಟು? (ಸಂಪೂರ್ಣ ಮಾಹಿತಿ ನೀಡುವುದು.).

ಶ್ರೀ ಆರ್.ವರ್ತೂರು ಪ್ರಕಾಶ್

(ಜವಳಿ ಸಚಿವರು)

ಅ) ರಾಜ್ಯದಲ್ಲಿ ಜವಳಿ ಉದ್ಯಮವು ಅಳಿವಿನ ಅಂಚಿಗೆ ತಲುಪುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ, ಅದಾಗ್ಯೂ ಜವಳಿ ಉದ್ಯಮದ ಅಭಿವೃದ್ಧಿಗಾಗಿ ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಕೈಮಗ್ಗ ವಲಯ ಯೋಜನೆಗಳು.

1. ಸಮಗ್ರ ಕೈಮಗ್ಗ ಅಭಿವೃದ್ಧಿ ಯೋಜನೆಯಡಿ ಕೈಮಗ್ಗ ಕ್ಲಸ್ಟರ್‌ಗಳ ಅಭಿವೃದ್ಧಿ ಪಡಿಸುವುದು.
2. ಮಹಾತ್ಮ ಗಾಂಧಿ ಬುನಕರ್ ಭೀಮ ಯೋಜನೆ.
3. ಆರೋಗ್ಯ ವಿಮಾ ಯೋಜನೆ.
4. ದುರ್ಬಲ ವರ್ಗದವರಿಗೆ ಸೀರೆ ಪಂಚೆ ವಿತರಣೆ.
5. ಕೈಮಗ್ಗ ಸಹಕಾರ ಸಂಘಗಳಿಗೆ ಸಹಾಯ ಯೋಜನೆಯಡಿ ನೇಕಾರರ ಮಕ್ಕಳಿಗೆ ವಿದ್ಯಾರ್ಥಿ ವೇತನ, ವೈದ್ಯಕೀಯ ವೆಚ್ಚ ಮರುಪಾವತಿ, ನೇಕಾರರ ದುಡಿಮೆ ಬಂಡವಾಳ ಸಾಲದ ಬಡ್ಡಿ ಸಹಾಯಧನ ಮತ್ತು ನೇಕಾರರ ಅಂತ್ಯಸಂಸ್ಕಾರ ವೆಚ್ಚ ಮಂಜೂರಾತಿ.
6. ಕೈಮಗ್ಗ ಉತ್ಪನ್ನಗಳಿಗೆ ಮಾರುಕಟ್ಟೆ ಸಹಾಯ ಯೋಜನೆಯಡಿ ಕೈಮಗ್ಗ ಉತ್ಪನ್ನಗಳ ಮಾರಾಟದ ಮೇಲೆ ಗ್ರಾಹಕರಿಗೆ ಶೇ. 20 ರಿಬೇಟ್ ಮಂಜೂರಾತಿ.
7. ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ಅಭಿವೃದ್ಧಿಗಾಗಿ ನೇಕಾರರ ವಿಶೇಷ ಪ್ಯಾಕೇಜ್ ಯೋಜನೆ.
8. ಕೈಮಗ್ಗ ನೇಕಾರರ ಮಿತವ್ಯಯ ನಿಧಿ ಯೋಜನೆ.

ವಿದ್ಯುತ್‌ಮಗ್ಗ ಅಭಿವೃದ್ಧಿ ಯೋಜನೆಗಳು:

1. ನೇಕಾರರಿಗೆ ಎರಡು ವಿದ್ಯುತ್‌ಮಗ್ಗಗಳ ಪೂರೈಕೆಗೆ ಸಹಾಯಧನ.
2. ವಿದ್ಯುತ್‌ಮಗ್ಗ ಅಥವಾ ಮಗ್ಗಪೂರ್ವ ಘಟಕಗಳಿಗೆ ವಿದ್ಯುತ್ ರಿಯಾಯಿತಿ.
3. ವಿದ್ಯುತ್‌ಮಗ್ಗ ಸಹಕಾರ ಸಂಘಗಳಿಗೆ ಷೇರು ಬಂಡವಾಳ.

ಸುವರ್ಣ ವಸ್ತ್ರ ನೀತಿ ಯೋಜನೆ:

1. ಸುವರ್ಣ ವಸ್ತ್ರ ನೀತಿ ಯೋಜನೆಯಡಿ ತರಬೇತಿ.
2. ಕೌಶಲ್ಯಾಭಿವೃದ್ಧಿ ಕೇಂದ್ರಗಳ ಸ್ಥಾಪನೆ.

3. ಜವಳ ಘಟಕಗಳಿಗೆ ಬಂಡವಾಳ ಹೂಡಿಕೆ ಸಹಾಯಧನ.
4. ಮೆಗಾ ಪ್ರಾಜೆಕ್ಟ್‌ಗಳ ಸ್ಥಾಪನೆ.

ವಸತಿ ಯೋಜನೆ:

ವಸತಿ ಯೋಜನೆಯಡಿ ವಸತಿರಹಿತ ಕೈಮಗ್ಗ ಮತ್ತು ವಿದ್ಯುತ್‌ಮಗ್ಗ ನೇಕಾರರಿಗೆ ವಸತಿ ನಿರ್ಮಾಣಕ್ಕೆ ಅನುದಾನ ಮಂಜೂರಾತಿ.

ವಿಶೇಷ ಘಟಕ ಯೋಜನೆ / ಗಿರಿಜನ ಉಪಯೋಜನೆ:

- ಕೈಮಗ್ಗ /ವಿದ್ಯುತ್‌ಮಗ್ಗ/ ಸೆಮಿಲೂಂ ಖರೀದಿ,
- ದುಡಿಮೆ ಬಂಡಾವಳ (ಕೈಮಗ್ಗ/ವಿದ್ಯುತ್‌ಮಗ್ಗ) ಸಹಾಯಧನ,
- ಹೊಸ ಸದಸ್ಯರಿಗೆ ಷೇರು ಮೊತ್ತ,
- ಮಗ್ಗಪೂರ್ವ ಸೌಲಭ್ಯ.
- ಸಾಮೂಹಿಕ ಸೌಲಭ್ಯ ಕೇಂದ್ರ.
- ಪ್ರಾರ್ಥಮಿಕ ಸಹಕಾರ ಸಂಘಕೆ ಷೇರು ಮೊತ್ತ.
- ನೇಕಾರರ ಕಾಲೋನಿ ಅಭಿವೃದ್ಧಿ.
- ಮಾರುಕಟ್ಟೆ ಪ್ರೋತ್ಸಾಹನಾ ಸಹಾಯಧನ,
- ಕೈಮಗ್ಗ ತರಬೇತಿ/ ವಿದ್ಯುತ್‌ಮಗ್ಗ ತರಬೇತಿ.
- ನೇಕಾರರಿಗೆ ಹೊರರಾಜ್ಯದಲ್ಲಿ ಅಧ್ಯಯನಾ ಪ್ರವಾಸ.
- ಕಾರ್ಯಾಗಾರ / ಮಗ್ಗದ ಕೋಣೆ ನಿರ್ಮಾಣ.

ಆ) ಕಳೆದ ಮೂರು ವರ್ಷಗಳಲ್ಲಿ ಜವಳಿ ಉದ್ಯಮದ ಪುನಶ್ಚೇತನಕ್ಕಾಗಿ ಸರ್ಕಾರವು ಮೀಸಲಿಟ್ಟ ಹಾಗೂ ಖರ್ಚು ಮಾಡಿದ ಹಣದ ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಶ್ರೀ ರೇವಣ್ಣ. ಹೆಚ್.ಡಿ(ಹೊಳೇನರಸೀಪುರ), ಮಾನ್ಯ ವಿಧಾನಸಭೆ ಸದಸ್ಯರು ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂ.95 ಕ್ಕೆ ಅನುಬಂಧ

ಜವಳಿ ಕ್ಷೇತ್ರದ ಅಭಿವೃದ್ಧಿಗಾಗಿ ರಾಜ್ಯ ಸರ್ಕಾರವು ಹಲವಾರು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿದ್ದು ಈ ಕಾರ್ಯಕ್ರಮದಡಿ ಕಳೆದ ಮೂರು ವರ್ಷಗಳಲ್ಲಿ ಸರ್ಕಾರದಿಂದ ಹಂಚಿಕೆ ಮಾಡಿರುವ ಆಯವ್ಯಯ ಅನುದಾನ, ಬಿಡುಗಡೆ ಮತ್ತು ವೆಚ್ಚದ ವಿವರಗಳು ಈ ಮುಂದಿನಂತಿವೆ.

(ರೂ. ಲಕ್ಷಗಳಲ್ಲಿ)

ಕ್ರ ಸಂ.	ಯೋಜನೆ	ವರ್ಷ								
		2009-10			2010-11			2011-12		
		ಹಂಚಿಕೆ	ಬಿಡುಗಡೆ	ವೆಚ್ಚ	ಹಂಚಿಕೆ	ಬಿಡುಗಡೆ	ವೆಚ್ಚ	ಹಂಚಿಕೆ	ಬಿಡುಗಡೆ	ವೆಚ್ಚ
ಕೈಮಗ್ಗ ವಲಯ ಯೋಜನೆಗಳು										
1	ಸಮಗ್ರ ಕೈಮಗ್ಗ ಅಭಿವೃದ್ಧಿ ಯೋಜನೆಯಡಿ ಕೈಮಗ್ಗ ಕ್ಲಸ್ಟರ್‌ಗಳ ಅಭಿವೃದ್ಧಿ ಪಡಿಸುವುದು.	820.00	343.90	343.90	740.00	246.82	246.82	795.99	725.32	725.32
2	ಮಹಾತ್ಮ ಗಾಂಧಿ ಬುನಕರ್ ಭೀಮ ಯೋಜನೆ.	14.00	13.08	13.08	15.00	14.52	14.22	16.53	16.53	16.53
3	ಆರೋಗ್ಯ ವಿಮಾ ಯೋಜನೆ.	45.00	14.79	14.79	50.00	44.93	44.93	53.64	53.64	53.64

ಕ್ರ. ಸಂ.	ಯೋಜನೆ	ವರ್ಷ								
		2009–10			2010–11			2011–12		
		ಹಂಚಿಕೆ	ಬಿಡುಗಡೆ	ವೆಚ್ಚ	ಹಂಚಿಕೆ	ಬಿಡುಗಡೆ	ವೆಚ್ಚ	ಹಂಚಿಕೆ	ಬಿಡುಗಡೆ	ವೆಚ್ಚ
4	ದುರ್ಬಲ ವರ್ಗದವರಿಗೆ ಸೀರೆ ಪಂಚೆ ವಿತರಣೆ.	200.00	200.00	200.00	200.00	200.00	200.00	150.00	150.00	150.00
5	ಕೈಮಗ್ಗ ಸಹಕಾರ ಸಂಘಗಳಿಗೆ ಸಹಾಯ ಯೋಜನೆಯಡಿ ನೇಕಾರರ ಮಕ್ಕಳಿಗೆ ವಿದ್ಯಾರ್ಥಿ ವೇತನ, ವೈದ್ಯಕೀಯ ವೆಚ್ಚ ಮರುಪಾವತಿ, ನೇಕಾರರ ದುಡಿಮೆ ಬಂಡವಾಳ ಸಾಲದ ಬಡ್ಡಿ ಸಹಾಯಧನ ಮತ್ತು ನೇಕಾರರ ಅಂತ್ಯಸಂಸ್ಕಾರ ವೆಚ್ಚ ಮಂಜೂರಾತಿ.	55.00	55.00	55.00	55.000	27.50	27.50	55.00	55.00	55.00

ಕ್ರ ಸಂ.	ಯೋಜನೆ	ವರ್ಷ								
		2009–10			2010–11			2011–12		
		ಹಂಚಿಕೆ	ಬಿಡುಗಡೆ	ವೆಚ್ಚ	ಹಂಚಿಕೆ	ಬಿಡುಗಡೆ	ವೆಚ್ಚ	ಹಂಚಿಕೆ	ಬಿಡುಗಡೆ	ವೆಚ್ಚ
6	ಕೈಮಗ್ಗ ಉತ್ಪನ್ನಗಳಿಗೆ ಮಾರುಕಟ್ಟೆ ಸಹಾಯ ಯೋಜನೆಯಡಿ ಕೈಮಗ್ಗ ಉತ್ಪನ್ನಗಳ ಮಾರಾಟದ ಮೇಲೆ ಗ್ರಾಹಕರಿಗೆ ಶೇ. 20 ರಿಬೇಟ್ ಮಂಜೂರಾತಿ.	275.00	275.00	275.00	290.00	290.00	290.00	290.00	290.00	290.00
7	ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ಅಭಿವೃದ್ಧಿಗಾಗಿ ನೇಕಾರರ ವಿಶೇಷ ಪ್ಯಾಕೇಜ್ ಯೋಜನೆ.	700.00	700.00	700.00	700.00	576.50	576.50	2325.00	2325.00	2325.00
8	ಕೈಮಗ್ಗ ನೇಕಾರರ ಮಿತವ್ಯಯ ನಿಧಿ ಯೋಜನೆ.	10.00	5.00	5.00	16.00	16.00	16.00	16.00	16.00	16.00

ಕ್ರ ಸಂ.	ಯೋಜನೆ	ವರ್ಷ								
		2009–10			2010–11			2011–2012		
		ಹಂಚಿಕೆ	ಬಿಡುಗಡೆ	ವೆಚ್ಚ	ಹಂಚಿಕೆ	ಬಿಡುಗಡೆ	ವೆಚ್ಚ	ಹಂಚಿಕೆ	ಬಿಡುಗಡೆ	ವೆಚ್ಚ
ವಿದ್ಯುತ್‌ಮಗ್ಗ ಅಭಿವೃದ್ಧಿ ಯೋಜನೆಗಳು										
1	ನೇಕಾರರಿಗೆ ಎರಡು ವಿದ್ಯುತ್‌ಮಗ್ಗಗಳ ಪೂರೈಕೆಗೆ ಸಹಾಯಧನ.	0	0	0	0	0	0	1000.00	1000.00	1000.00
2	ವಿದ್ಯುತ್‌ಮಗ್ಗ ಅಥವಾ ಮಗ್ಗಪೂರ್ವ ಘಟಕಗಳಿಗೆ ವಿದ್ಯುತ್ ರಿಯಾಯಿತಿ.	1788.150	1788.150	1788.150	1900.000	1900.000	1900.00	2332.00	2332.00	2332.00
3	ವಿದ್ಯುತ್‌ಮಗ್ಗ ಸಹಕಾರ ಸಂಘಗಳಿಗೆ ಷೇರು ಬಂಡವಾಳ.	10.00	10.00	10.00	5.00	5.00	5.00	10.00	10.00	10.00
ಸುವರ್ಣ ವಸ್ತ್ರ ನೀತಿ ಯೋಜನೆ.		4000.00	2200.00	2200.00	6000.00	4500.00	4500.00	2500.00	2500.00	2500.00

ವಸತಿ ಯೋಜನೆ:										
1	ವಸತಿ ಯೋಜನೆಯಡಿ ವಸತಿರಹಿತ ಕೈಮಗ್ಗ ಮತ್ತು ವಿದ್ಯುತ್‌ಮಗ್ಗ ನೇಕಾರರಿಗೆ ವಸತಿ ನಿರ್ಮಾಣಕ್ಕೆ ಅನುದಾನ ಮಂಜೂರಾತಿ.	1500.00	1166.00	1166.00	600.00	527.50	527.50	500.00	440.31	440.31
ವಿಶೇಷ ಘಟಕ ಯೋಜನೆ		**182.925**	**182.925**	**182.925**	**445.925**	**445.925**	**445.925**	**490.698**	**490.698**	**490.698**
ಗಿರಿಜನ ಉಪ ಯೋಜನೆ		**113.000**	**113.000**	**113.000**	**211.000**	**211.000**	**211.000**	**179.257**	**179.257**	**179.257**

ಶ್ರೀ ವೆಂಕಟರಾವ್ ನಾಡಗೌಡ : (ಶ್ರೀ ಹೆಚ್.ಡಿ. ರೇವಣ್ಣರವರ ಪರವಾಗಿ) ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ರಾಜ್ಯದಲ್ಲಿ ಜವಳಿ ಉದ್ಯಮವು ಅಳಿವಿನ ಅಂಚಿಗೆ ತಲುಪುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎನ್ನುವ ಪ್ರಶ್ನೆಗೆ ಬಂದಿಲ್ಲ ಎನ್ನುವ ಉತ್ತರವನ್ನು ಕೊಟ್ಟಿದ್ದಾರೆ. ಹಾಗಿದಲ್ಲಿ ಜವಳಿ ಉದ್ಯಮದ ಪುನಶ್ಚೇತನ ಹಾಗೂ ಉತ್ತೇಜನಕ್ಕಾಗಿ ಸರ್ಕಾರವು ಕೈಗೊಂಡಿರುವ ಕ್ರಮಗಳನ್ನು ಇಲ್ಲಿ ಸಂಪೂರ್ಣವಾಗಿ ಒದಗಿಸಿದ್ದಾರೆ. ಇಷ್ಟೇಲ್ಲಾ ಸರ್ಕಾರ ಕ್ರಮವನ್ನು ತೆಗೆದುಕೊಂಡಿದ್ದರೂ ಸಹ ಜವಳಿ ಉದ್ಯಮ ಅಳಿವಿನ ಅಂದಿನತ್ತ ಹೋಗುತ್ತಿದೆ. ಅದು ಸತ್ಯ. ಅದು ಸರ್ಕಾರದ ಗಮನಕ್ಕೆ ಬಂದಿಲ್ಲವೆಂದರೆ ಅದು ದುರ್ದೈವ ಆಗುತ್ತದೆ. ಇಷ್ಟೆಲ್ಲಾ ಕ್ರಮವನ್ನು ತೆಗೆದುಕೊಂಡಿದ್ದೀರಿ. ಕ್ರಮ ತೆಗೆದುಕೊಂಡಿಲ್ಲವೆಂದು ಹೇಳುತ್ತಿಲ್ಲ. ಸರ್ಕಾರ ಇಷ್ಟೆಲ್ಲಾ ಕ್ರಮವನ್ನು ತೆಗೆದುಕೊಂಡಿದ್ದರೂ ಏಕೆ ಈ ಉದ್ಯಮ ಮೇಲೆ ಬರುತ್ತಿಲ್ಲ ಅಥವಾ ಸ್ವಾವಲಂಬಿಯಾಗಿ ನಡೆಸುವುದಕ್ಕೆ ಆಗುತ್ತಿಲ್ಲ ಎನ್ನುವುದರ ಬಗ್ಗೆ ಸರ್ಕಾರ ಚಿಂತನೆ ಮಾಡಬೇಕಾಗುತ್ತದೆ, ಇಷ್ಟೆಲ್ಲಾ ಯೋಜನೆಗಳನ್ನು ತೆಗೆದುಕೊಂಡಿದ್ದರೂ ಇದೇನು ಫಲ ಕೊಡುತ್ತಿದೆಯೋ ಇಲ್ಲವೋ, ಜನರಿಗೆ ಮುಟ್ಟುತ್ತಿದೆಯೋ ಇಲ್ಲವೋ, ಎಲ್ಲೋ ಒಂದು ಕಡೆ ಏನೋ ತಪ್ಪು ಇದೆ ಎನ್ನುವುದು ನನ್ನ ಭಾವನೆ. ಆದ್ದರಿಂದ ತಮ್ಮ ಮೂಲಕ ಮಾನ್ಯ ಸಚಿವರ ಗಮನಕ್ಕೆ ತರುತ್ತೇನೆ. ಜಗಳಿ ಉದ್ಯಮ ಅಳಿವಿನ ಅಂಚಿಗೆ ಹೋಗುತ್ತಿರುವುದು ಸತ್ಯ. ಅದು ಮಾನ್ಯ ಸಚಿವರ ಗಮನಕ್ಕೆ ಬರಬೇಕೆಂದು ನನ್ನ ಮನವಿ.

ಶ್ರೀ ಗೋವಿಂದ ಎಂ.ಕಾರಜೋಳ (ಸಣ್ಣ ನೀರಾವರಿ, ಕನ್ನಡ ಮತ್ತು ಸಂಸ್ಕೃತಿ ಸಚಿವರು) (ಜವಳಿ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೆ, ಮಾನ್ಯ ರೇವಣ್ಣನವರು ಇದ್ದಿದ್ದರೆ ಸರಿಯಿರುತ್ತಿತ್ತು. ಪ್ರಶ್ನೆ ಕೇಳಿದವರು ಇಲ್ಲ. ಭತ್ತ ಬೆಳೆಯುವವರು ಇವರಿಗೆ ಗೊತ್ತಿಲ್ಲ. ನಾನು ತಮ್ಮ ಮುಖಾಂತರ ಮಾನ್ಯ ಶಾಸಕರ ಗಮನಕ್ಕೆ ತರುವುದೇನೆಂದರೆ, ಜವಳಿ ಉದ್ಯಮ ಅಳಿವಿನ ಅಂಚಿನಲ್ಲಿಲ್ಲ. ಸರ್ಕಾರ ನೇಕಾರರಿಗೆ ಉದ್ಯೋಗ ಕೊಡತಕ್ಕಂಥದ್ದಕ್ಕೆ ಏನೇನು ಸ್ಕೀಮ್‌ಗಳನ್ನು ಮಾಡಬೇಕೋ ಅವೆಲ್ಲವನ್ನೂ ಮಾಡಿದೆ. ಅವರಿಗೆ 50% ರಿಯಾಯಿತಿಯೊಳಗೆ ಪ್ರತಿ ಕುಟುಂಬಕ್ಕೂ ಎರಡು ಪವರ್‌ಲೂಮ್‌ಗಳನ್ನು ಕೊಡುವಂತಹ ಸ್ಕೀಮ್ ಅನ್ನು ಕಳೆದ ವರ್ಷಗಳಿಂದ ಜಾರಿಗೆ ತಂದಿದ್ದೇವೆ.

ರಿಯಾಯಿತಿ ದರದಲ್ಲಿ ವಿದ್ಯುತ್ ಅನ್ನು ಕೊಡುವಂಥದ್ದನ್ನು ತಂದಿದ್ದೇವೆ. ಅವರಿಗೆ ಕಚ್ಚಾಮಾಲು ಪೂರೈಸುವುದಕ್ಕೆ, ಪ್ರತಿಯೊಂದಕ್ಕೂ ಸರ್ಕಾರದಿಂದ ಸಹಕಾರವಿದೆ. ಅಷ್ಟೇ ಅಲ್ಲದೇ ಅವರ ಮಕ್ಕಳ ಶಿಕ್ಷಣಕ್ಕೂ ಕೂಡ ನಾವು ಸಹಾಯವನ್ನು ಮಾಡುತ್ತಿದ್ದೇವೆ. ಹೆಚ್ಚಿನ ಪ್ರಮಾಣದಲ್ಲಿ ನೇಕಾರರು ಇರತಕ್ಕಂಥವರು ನಮ್ಮ ಭಾಗದಲ್ಲಿಯೇ. ಕೊಪ್ಪಳದಲ್ಲಿ ಸ್ವಲ್ಪ ಜನರು ಇದ್ದಾರೆ. ಅಂತಹ ಪರಿಸ್ಥಿತಿಯೇನೂ ನಿರ್ಮಾಣವಾಗಿಲ್ಲ. ನಮ್ಮ ಸರ್ಕಾರ ಬಂದ ಮೇಲೆ ಅನೇಕ ಕಾರ್ಯಕ್ರಮಗಳನ್ನು ರೂಪಿಸಿದ ಮೇಲೆ, ನೇಕಾರರು ಇವತ್ತು ನೆಮ್ಮದಿಯಾಗಿ ಬದುಕನ್ನು ಸಾಗಿಸುತ್ತಿದ್ದಾರೆ. ಅಳಿವಿನ ಅಂಚಿಗೆ ಹೋಗುವುದಕ್ಕೆ ಯಾವುದೇ ಕಾರಣವಿಲ್ಲ. ಇವತ್ತು ಹಾಸನದಲ್ಲಿಯೇ ಮೂರು ಉದ್ಯಮಗಳಿವೆ. ನಮ್ಮ ಕುಮಾರಸ್ವಾಮಿಯವರು ಇಲ್ಲೇ ಇದ್ದಾರೆ. National Textile Corporation ಎಂದು ಒಂದು ಸಂಸ್ಥೆ ಇದೆ. ಬಹಳ ಚೆನ್ನಾಗಿ ನಡೆಯುತ್ತಿದೆ. ಎರಡನೆಯದು ಮಿನರ್ವ ಮಿಲ್ಸ್‌ನವರು ಮಾಡಿದ್ದಾರೆ. ಅಷ್ಟೇ ಅಲ್ಲದೇ Himatsinga ಎಂದು ಇದೆ, ಅವರದ್ದೂ ಕೂಡ ಚೆನ್ನಾಗಿದೆ. ಎಲ್ಲಾ ಉದ್ಯಮಗಳು ಚೆನ್ನಾಗಿವೆ. ಯಾವುದೂ ಅಳಿವಿನ ಅಂಚಿನಲ್ಲಿ ಇಲ್ಲ. ತಾವು ಏನೂ ಆತಂಕಪಡುವಂತಹ ಕಾರಣ ಇಲ್ಲ. ಅಕಸ್ಮಾತ್ ಅವರಿಗೇನಾದರೂ ತೊದರೆ ಇದ್ದರೆ, ಸರ್ಕಾರ ಸಹಾಯ ಮಾಡಲಿಕ್ಕೆ ಖಂಡಿತವಾಗಿಯೂ ಸಿದ್ಧವಿದೆ.

ಶ್ರೀ ವೆಂಕಟರಾವ್ ನಾಡಗೌಡ : ವಿದ್ಯುತ್‌ಅನ್ನು ರಿಯಾಯಿತೀದರಲ್ಲಿ ಕೊಡುತ್ತೇವೆಂದು ತಾವು ಏನು ಹೇಳಿದಿರಿ ಅಲ್ಲಿ ವಿದ್ಯುತೇ ಇಲ್ಲ. ಅವರಿಗೆ ಕೊಡುವುದಕ್ಕೂ ಆಗುವುದಿಲ್ಲ. ಅದಕ್ಕೇನಾದರೂ ಜನರೇಟರ್ ಕೊಡುತ್ತೀರಾ ನೋಡಿ.

ಅಧ್ಯಕ್ಷರು: ಆನಂತರ ಕೇಳಿ.

ಶ್ರೀ ಗೂಳಿಹಟ್ಟಿ ಡಿ.ಶೇಖರ್ (ಹೊಸದುರ್ಗ) : ಮಾನ್ಯ ಅಧ್ಯಕ್ಷರೆ, ನೇಕಾರರ ಬಗ್ಗೆ ಮಾನ್ಯ ಸದಸ್ಯರಾದ ರೇವಣ್ಣನವರು ಪ್ರಶ್ನೆ ಎತ್ತಿದ್ದಾರೆ. ನಿಜಕ್ಕೂ ನೇಕಾರರ ಬಗ್ಗೆ ಸರ್ಕಾರ ಬಹಳಷ್ಟು ನಿರ್ಲಕ್ಷ್ಯ ಧೋರಣೆ ತೋರಿದೆ ಎಂದು ನಾನು ಹೇಳುವುದಕ್ಕೆ ಬಯಸುತ್ತೇನೆ. ರೈತರು ಎಷ್ಟು ಮುಖ್ಯನೋ ಅದೇ ರೀತಿ ಜವಳಿ ಉದ್ಯಮದ ನೇಕಾರರೂ ಸಹ ಸಮಾಜದಲ್ಲಿ ಅಷ್ಟೇ ಪ್ರಮುಖ ಪಾತ್ರವನ್ನು ವಹಿಸುತ್ತಾರೆ. 'ಸುವರ್ಣವಸ್ತ್ರ ನೀತಿ'ಯಲ್ಲಿ 500 ಕೋಟಿ

ರೂಪಾಯಿಗಳನ್ನು ಇಡುತ್ತೇವೆ ಎಂದು ಹೇಳಿದ್ದರು. ಆದರೆ ಇದುವರೆಗೂ ಕೇವಲ 100–150 ಕೋಟಿ ರೂ.ಗಳು ಮಾತ್ರ ಐದು ವರ್ಷಕ್ಕೆ ಖರ್ಚಾಗಿದೆ ಮತ್ತು ಶಿಕ್ಷಣ ಇಲಾಖೆಯವರು ನೇರವಾಗಿ 'ವಿದ್ಯಾವಿಕಾಸ' (VVS) ದಲ್ಲಿ ಸಮವಸ್ತ್ರಗಳನ್ನು ಜವಳಿ ಇಲಾಖೆಯಿಂದಲೇ ಖರೀದಿ ಮಾಡಬೇಕೆಂದು ಇದೆ. ನೇಕಾರರಿಗೆ ಅನುಕೂಲವಾಗಲಿ ಎನ್ನುವ ಉದ್ದೇಶದಿಂದ ಆ ರೀತಿ ಮಾಡಲಾಗಿದೆ. ಆದರೆ, ಶಿಕ್ಷಣ ಇಲಾಖೆ ಧೋರಣೆ ಮಾಡಿಕೊಂಡು ನೇಕಾರರನ್ನು ತುಳಿಯುವಂತಹ ಕೆಲಸ ಮಾಡಿ ಅವರೇ ನೇರವಾಗಿ ಸಮವಸ್ತ್ರ purchase ಮಾಡುತ್ತಿದ್ದಾರೆ. ದಯಮಾಡಿ ಸರ್ಕಾರ ಮುಖ್ಯಮಂತ್ರಿಯವರು ಮಧ್ಯಪ್ರವೇಶಿಸಿ, ಜವಳಿ ಇಲಾಖೆಯಿಂದಲೇ, ನೇಕಾರರಿಂದಲೇ ನೇರವಾಗಿ ಖರೀದಿ ಮಾಡುವಂತಹ ವ್ಯವಸ್ಥೆ ಮಾಡಬೇಕು. 'ಸುವರ್ಣ ವಸ್ತ್ರ ನೀತಿ'ಯಲ್ಲಿ spinning mill ಗಳಿಗೆ power subsidy ಇದೆಯಲ್ಲಾ, ದಯಮಾಡಿ ಹಳೆಯ spinning mill ನವರಿಗೂ ಕೂಡ power subsidy ಕೊಟ್ಟರೆ ತುಂಬಾ ಅನುಕೂಲವಾಗುತ್ತದೆ. ಕಾವೇರಿ ನಿಗಮ ಎಂದು ಇದೆ. ಆದರಲ್ಲಿ ಸುಮಾರು 40–50 ತಿಂಗಳಿನಿಂದ ಸಂಬಳವಿಲ್ಲದೇ, ಊಟಕ್ಕಿಲ್ಲದೇ ನೌಕರರು ಸಂಕಷ್ಟಪಡುತ್ತಿದ್ದಾರೆ. ದಯಮಾಡಿ ಕಾವೇರಿ ಹ್ಯಾಂಡ್‌ಲೂಮ್ಸ್‌ನ ಬಗ್ಗೆಯೂ ಗಮನಹರಿಸಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಸಿದ್ದು ಸವದಿ (ಆಡಳಿತ ಪಕ್ಷದ ಮುಖ್ಯ ಸಚೇತಕರು) : ಮಾನ್ಯ ಅಧ್ಯಕ್ಷರೆ, ನಮ್ಮ ಸರ್ಕಾರ ಬಂದ ಮೇಲೆ ನೇಕಾರರಿಗೆ ಈಗಾಗಲೇ ಮಾನ್ಯ ಗೋವಿಂದ ಕಾರಜೋಳರವರು ಹೇಳಿದ ಪ್ರಕಾರ, ಸಾಕಷ್ಟು ಸವಲತ್ತುಗಳನ್ನು ಒದಗಿಸುವಂತಹ ಕೆಲಸವನ್ನು ಮಾಡಿದ್ದೇವೆ.

ಶ್ರೀ ವೆಂಕಟರಾವ್ ನಾಡಗೌಡ : ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಅವರು ಕೊಡುತ್ತಾರೆಯೇ?

(ಗೊಂದಲ)

ಶ್ರೀ ಸಿದ್ದುಸವದಿ : ನಾನು ಉತ್ತರ ಹೇಳುತ್ತಿಲ್ಲ. ನಾನು ಸ್ವತಂತ್ರವಾಗಿ ಕೇಳುತ್ತೇನೆ.

(ಗೊಂದಲ)

ಶ್ರೀ ವೆಂಕಟರಾವ್ ನಾಡಗೌಡ : ತಾವು ಪ್ರಶ್ನೆ ಕೇಳುತ್ತಿದ್ದೀರಾ ಅಥವಾ ಉತ್ತರ ಹೇಳುತ್ತಿದ್ದೀರಾ?

(ಗೊಂದಲ)

ಶ್ರೀ ಗೋವಿಂದ ಎಂ.ಕಾರಜೋಳ : ಅವರು ಉತ್ತರವನ್ನು ಹೇಳುತ್ತಿಲ್ಲ. ಮಾನ್ಯ ನಾಡಗೌಡರೆ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಸಿದ್ದುಸವದಿ: ನಮ್ಮ ಕ್ಷೇತ್ರದ ಪ್ರಶ್ನೆ ಇದೆ ಅದನ್ನು ಕೇಳುತ್ತಿದ್ದೇನೆ.

(ಗೊಂದಲ)

ಶ್ರೀ ಗೋವಿಂದ ಎಂ.ಕಾರಜೋಳ : ಇಡೀ ರಾಜ್ಯದಲ್ಲಿಯೇ ಅತಿ ಹೆಚ್ಚು ನೇಕಾರರು ಇರತಕ್ಕಂಥ ಮತ ಕ್ಷೇತ್ರ ಯಾವುದಾದರೂ ಇದ್ದರೆ ಅದು ತೇರದಾಳ. ಅವರು ನೇಕಾರರ ಬಗ್ಗೆ ಮಾತನಾಡುತ್ತಿದ್ದಾರೆ. ಅವರು ಏನು ಹೇಳುತ್ತಿದ್ದಾರೋ ಹೇಳಲಿ. ಅವರ ಅಭಿಪ್ರಾಯ ಹೇಳಲಿ.

(ಗೊಂದಲ)

ಅಧ್ಯಕ್ಷರು : ಅವರು ಉತ್ತರ ಹೇಳುತ್ತಿಲ್ಲ. ಅವರ ಅಭಿಪ್ರಾಯವನ್ನು ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ ಸಿದ್ದು ಸವದಿ : ಇತಿಹಾಸದಲ್ಲಿಯೇ ಮೊದಲಬಾರಿಗೆ ನೇಕಾರ ರೈತರಿಗಾಗಿಯೇ 25,000 ರೂಪಾಯಿ ಸಾಲ ಮನ್ನಾ, ಬಡ್ಡಿ ಮನ್ನಾ, ರಿಯಾಯಿತಿಯಿಂದ ಸಾಲ ಕೊಡುವಂತಹ ವ್ಯವಸ್ಥೆಯನ್ನು ನಮ್ಮ ಸರ್ಕಾರ ಮೊದಲಬಾರಿಗೆ ಮಾಡಿದೆ. ವಿದ್ಯುತ್ ರಿಯಾಯಿತಿಯನ್ನು ಕೊಡುವಂತಹ ಕೆಲಸ ನಮ್ಮ ಸರ್ಕಾರ ಮಾಡಿದೆ. ಆದರೆ, ಈಗ ರೈತರಂತೆ ನೇಕಾರರಿಗೂ ಬರಗಾಲವಿದೆ. ನಾನು ಸರ್ಕಾರಕ್ಕೆ ಇಡೀ ರಾಜ್ಯದ ನೇಕಾರರ ಪರವಾಗಿ ವಿನಂತಿ ಮಾಡಿಕೊಳ್ಳುತ್ತೇನೆ. ಪ್ಯಾಕೇಜ್‌ನಲ್ಲಿ ರೈತರಿಗೆ ಯಾವ ರೀತಿ ಈ ಬಾರಿ 25,000 ಸಾಲ ಮನ್ನಾ ಮಾಡಿದ್ದೀರಿ ನೇಕಾರರಿಗೂ ಸಹ ಸಾಲ ಮನ್ನಾ, ಬಡ್ಡಿ ಮನ್ನಾ ಮಾಡಬೇಕೆಂದು ತಮ್ಮ ಮುಖಾಂತರ ಸರ್ಕಾರವನ್ನು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಗೋವಿಂದ ಎಂ. ಕಾರಜೋಳ : ಮಾನ್ಯ ಅಧ್ಯಕ್ಷರೆ, ನೇಕಾರರ ಬಗ್ಗೆ ಸಾಕಷ್ಟು ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಸದಸ್ಯರುಗಳಾದ ಶ್ರೀ ಗೂಳಿಹಟ್ಟಿ ಶೇಖರ್, ಶ್ರೀ ಸಿದ್ದು ಸವದಿ ಮತ್ತು ಶ್ರೀ ನಾಡಗೌಡರವರುಗಳು ಇಟ್ಟಿರುವಂತಹ ಎಲ್ಲಾ ಬೇಡಿಕೆಗಳನ್ನು ಸರ್ಕಾರವು ಗಂಭೀರವಾಗಿ ಪರಿಗಣಿಸುತ್ತದೆ.

ಪ್ರಶ್ನೆ ಸಂಖ್ಯೆ : 38 (349)

ಶ್ರೀ. ರವಿಸುಬ್ರಹ್ಮಣ್ಯ. ಎಲ್.ಎ : ಮಾನ್ಯ ಅಧ್ಯಕ್ಷರು

ಅಧ್ಯಕ್ಷರು : ಆಯಿತು. ಶ್ರೀ ರವಿಸುಬ್ರಹ್ಮಣ್ಯರವರ ಪ್ರಶ್ನೆ ಸಂಖ್ಯೆ:38(349). ಮಾನ್ಯ ಸಚಿವರೆ ತಾವು ಉತ್ತರವನ್ನು ಕೊಡುವುದಕ್ಕೆ ಕಾಲಾವಕಾಶವನ್ನು ಕೇಳಿದ್ದೀರಿ. ಉತ್ತರವನ್ನು ಯಾವಾಗ ಕೊಡುತ್ತೀರಿ?

ಶ್ರೀ ಸಿ.ಪಿ.ಯೋಗೇಶ್ವರ : ಮಾನ್ಯ ಸದಸ್ಯರಾದ ಶ್ರೀ ರವಿಸುಬ್ರಹ್ಮಣ್ಯರವರು ರಾಜ್ಯದ ಎಲ್ಲಾ ಕೆರೆಗಳ ವಿಚಾರದ ಬಗ್ಗೆ ಕೇಳಿದ್ದಾರೆ. ಈ ಅಸೆಂಬ್ಲಿಯು ಮುಗಿಯುವುದರೊಳಗಾಗಿ ಅಂದರೆ 2–3 ದಿನದಲ್ಲಿ ಉತ್ತರವನ್ನು ಕೊಡುತ್ತೇನೆ.

ಶ್ರೀ ರವಿಸುಬ್ರಹ್ಮಣ್ಯ.ಎಲ್.ಎ : ಕಳೆದ ಬಾರಿ ಸದನದಲ್ಲಿಯೂ ಕೂಡ ಈ Forest ಬಗ್ಗೆ ಪ್ರಶ್ನೆಯನ್ನು ಕೇಳಿದ್ದೇನೆ. ಆಗಲೂ ಕೂಡ ಇದೇ ಉತ್ತರವನ್ನು ಕೊಟ್ಟಿದ್ದಾರೆ. ಏಕೆಂದರೆ ಅಧಿಕಾರಿಗಳು ಸ್ವಲ್ಪ ಜವಾಬ್ದಾರಿಯನ್ನು ವಹಿಸಲಿ ಎಂದು ಕೇಳುತ್ತಿದ್ದೇನೆ.

ಅಧ್ಯಕ್ಷರು : ಮಾನ್ಯ ಸಚಿವರ ಹತ್ತಿರ ಈಗ ಉತ್ತರವಿಲ್ಲ ಇನ್ನು 2–3 ದಿನದಲ್ಲಿ ಉತ್ತರವನ್ನು ಕೊಡುತ್ತೇನೆಂದು ಹೇಳಿದ್ದಾರೆ. ಡಾ: ಮಹದೇವಪ್ಪ ಹೆಚ್.ಸಿ.ರವರೆ ತಾವು ಪ್ರಶ್ನೆಯನ್ನು ಕೇಳಿ.